ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 50॥ UDP/1263/2018-20 ॥ R.NO.50495/91 ॥ ತಾರೀಕು : 09–01–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಬೈಂದೂರು ಕ್ಷೇತ್ರದಲ್ಲಿ 491 ಕೋಟಿ ರೂ. ಮೊತ್ತದ ಕಾಮಗಾರಿ ಮುಖ್ಯಮಂತ್ರಿಯಿಂದ ಒಂದೇ ವೇದಿಕೆಯಲ್ಲಿ 21 ಉದ್ಘಾಟನೆ, 15 ಶಿಲಾನ್ಯಾಸ




ಕರ್ನಾಟಕದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಬೈಂದೂರು ಗಾಂಧಿಮೈದಾನದ ವೇದಿಕೆಯಿಂದ 21 ಸರಕಾರಿ ಕಾಮಗಾರಿ ಯೋಜನೆಗಳ ಉದ್ಘಾಟನೆ ಹಾಗೂ 15 ಕಾಮಗಾರಿಗಳ ಶಿಲಾನ್ಯಾಸ ನಡೆಸಿದರು. ಉದ್ಘಾಟನೆ ಪಟ್ಟಿಯಲ್ಲಿ ಸೇರಿಸಲಾದ ಹಲವು ಯೋಜನೆಗಳು ಈಗಾಗಲೇ ಕಾರ್ಯಾರಂಭ ಆಗಿದ್ದರೂ ಮುಖ್ಯಮಂತ್ರಿಗಳ ಕೈಯಲ್ಲಿ ಉದ್ಘಾಟನೆಗೊಂಡು ಗೌರವ ಪಡೆದವು.

ಬೈಂದೂರು ಗಾಂಧಿಮೈದಾನದಲ್ಲಿ ಶಾಸಕ ಗೋಪಾಲಪೂಜಾರಿಯವರ ನೇತೃತ್ವದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಉತ್ಸಾಹದಿಂದ ಪಾಲ್ಗೊಂಡು ಸರಕಾರಿ ಯೋಜನೆಗಳ ಉದ್ಘಾಟನೆ ಹಾಗೂ ಶಿಲಾನ್ಯಾಸಗಳನ್ನು ಸಾಂಕೇತಿಕವಾಗಿ ನೆರವೇರಿಸಿ ಕರ್ನಾಟಕ ಸರಕಾರದ ಸಾಧನೆಗಳನ್ನು ವಿವರಿಸಿದರು.

ಲೋಕೋಪಯೋಗಿ ಇಲಾಖೆ, ಒಳನಾಡು ಸಾರಿಗೆ ಇಲಾಖೆ, ಕೃಷಿ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಪಿ.ಎಂ.ಜಿ.ಪೈ ಯೋಜನಾ ವಿಭಾಗ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಸಮಾಜ ಕಲ್ಯಾಣ ಇಲಾಖೆ, ಬಂದರು ಮತ್ತು ಮೀನುಗಾರಿಕಾ ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರ ಕಾಮಗಾರಿಗಳ ಉದ್ಘಾಟನೆ, ಶಿಲಾನ್ಯಾಸ ಇದ್ದುದರಿಂದ ಇಡೀ ಜಿಲ್ಲೆಯ ತಾಲ್ಲೂಕಿನ ಅಧಿಕಾರಿಗಳ ತಂಡ ಅವರ ಸಹಾಯಕರ ತಂಡವೇ ಬೈಂದೂರಿನಲ್ಲಿತ್ತು. ಕೃಷಿ ಇಲಾಖೆಗಳಿಗೆ ಸಂಬಂಧಪಟ್ಟ ಬಹುತೇಕ ಸಿಬ್ಬಂದಿಗಳೂ ಹಾಜರಿದ್ದರು.

ಶಿಕ್ಷಣ ಇಲಾಖೆಯ ವತಿಯಿಂದ ಅಧಿಕಾರಿಗಳು, ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಆಡಳಿತ ಪಕ್ಷದ ಕಾರ್ಯಕರ್ತರೇ ತುಂಬಿದ ಸಭೆಯಲ್ಲಿ, ಪಕ್ಷದ ಕಾರ್ಯಕರ್ತರು ಬೈಂದೂರು ಕ್ಷೇತ್ರದ ಬಹುತೇಕ ಹಳ್ಳಿಗಳಿಂದ ಭಾಗವಹಿಸುವಂತೆ ವ್ಯವಸ್ಥೆ ಮಾಡಲಾಗಿತ್ತು.

ಸಾವಿರಾರು ಮಂದಿ ವಿವಿಧ ಯೋಜನೆಗಳ ಫಲಾನುಭವಿಗಳು ಉಪಸ್ಥಿತರಿದ್ದರು. ಕೆ.ಎಸ್.ಆರ್.ಟಿ.ಸಿ.ಯ ಬಹಳಷ್ಟು ಬಸ್‌ಗಳನ್ನು ಸಮಾವೇಶದಲ್ಲಿ ಪಾಲ್ಗೊಂಡ ಜನರಿಗಾಗಿ ವ್ಯವಸ್ಥೆ ಮಾಡಲಾಗಿತ್ತು. ವಾಹನಗಳ ದಟ್ಟನೆ ಹೆಚ್ಚಾದುದರಿಂದ ಬೈಂದೂರು ಪರಿಸರದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಲ್ಲಾ ಬಂದೋಬಸ್ತು ಪೋಲಿಸರಿಗೆ ಸವಲಾಗಿ ಪರಿಣಮಿತಿಸಿತು. ಮುಖ್ಯಮಂತ್ರಿಗಳೊಡನೆ ಉಸ್ತುವಾರಿ ಸಚಿವ ಪ್ರಮೋದ್ ಮಧ್ವರಾಜ್ ಸಚಿವ ಯು.ಟಿ.ಖಾದರ್ ,ರಾಜ್ಯಸಭಾ ಸದಸ್ಯ ಆಸ್ಕರ್ ಫೆರ್ನಾಂಡೀಸ್, ವಿಧಾನ ಪರಿಷತ್ ಸದಸ್ಯ ಕೆ.ಪ್ರತಾಪಚಂದ್ರ ಶೆಟ್ಟಿ , ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಎಂ.ಎನ್.ರಾಜೇಂದ್ರ ಕುಮಾರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

**ಆಡಳಿತ ಯಂತ್ರ ದುರುಪಯೋಗ : ಬಿಜೆಪಿ:**

ಕರ್ನಾಟಕದ ಕಾಂಗ್ರೆಸ್ ಸರಕಾರ ಸಮಾವೇಶಕ್ಕಾಗಿ ಶಾಸಕರ ಮುಖಾಂತರ ಆಡಳಿತ ವರ್ಗವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ಬೈಂದೂರು ಬಿಜೆಪಿ ಖಂಡಿಸಿದೆ.

ಚುನಾವಣೆ ಹತ್ತಿರ ಬರುತ್ತಿರುವಾಗ ಸರಕಾರ , ಕಾಂಗ್ರೆಸ್ ಸಾಧನಾ ಸಮಾವೇಶ ಏರ್ಪಾಡು ಮಾಡಿ ಜನರ ಹಣ ದುರ್ಬಳಕೆ ಮಾಡುತ್ತಿದೆ. ರಾಜ್ಯದ ಬಹುಮುಖ್ಯ ಯೋಜನೆಗಳಿಗೆ ಕೇಂದ್ರ ಸರಕಾರ ಅನುದಾನ ನೀಡಿದ್ದು ಅದನ್ನು ಮರೆಮಾಚಿ ಎಲ್ಲ ತಮ್ಮ ಸರಕಾರದಿಂದಲೇ ನಡೆಯುತ್ತಿದೆ ಎಂದು ಬಿಂಬಿಸಲಾಗುತ್ತಿದೆ ಎಂದು ಬಿಜೆಪಿ ನಾಯಕ ಸುಕುಮಾರ ಶೆಟ್ಟಿ ಆರೋಪಿಸಿದ್ದಾರೆ. ಹಳೆಯ ಕಾಮಗಾರಿಗಳ ಉದ್ಘಾಟನೆ, ಇನ್ನೂ ಮಂಜೂರಾಗದ ಕಾಮಗಾರಿಗಳ ಶಿಲಾನ್ಯಾಸ ಸಿ.ಎಂ. 490 ಕೋಟಿ ಮೊತ್ತ ಕಾರ್ಯಕ್ರಮದಲ್ಲಿ ಅಳವಡಿಸಲಾಗಿದೆ ಎಂದೂ ಟೀಕೆ ಮಾಡಿದರು.

(9ನೇ ಪುಟಕ್ಕೆ)

## ಇನಿದನಿ ಸಂಗೀತ ಸಂಜೆಗೆ, ವಿ. ಮನೋಹರ್

ಕಲಾಕ್ಷೇತ್ರ–ಕುಂದಾಪುರ ಸಂಸ್ಥೆಯ ವತಿಯಿಂದ ನಡಸಲ್ಪಡುವ ಹಳೆಯ ಸುಮಧುರ ಕನ್ನಡ ಚಿತ್ರಗೀತೆಗಳ ರಸಮಂಜರಿ ಕಾರ್ಯಕ್ರಮ ಇನಿದನಿ ಗೆ ಖ್ಯಾತ ಸಂಗೀತ ನಿರ್ದೇಶಕ, ಸಾಹಿತಿ, ವಿ. ಮನೋಹರ್ ಇವರು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

ಕಳೆದ 8 ವರುಷಗಳಿಂದ 70–80ರ ದಶಕದ ಆಯ್ದ ಹಾಡುಗಳನ್ನು ಅಳವಡಿಸಿಕೊಂಡು, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಆಹ್ವಾನಿತ ಕಲಾವಿದರುಗಳಿಂದ ನಡೆಸಲ್ಪಡುವ ಇನಿದನಿ ರಸಮಂಜರಿಯು ಕುಂದಾಪುರದಲ್ಲಿ ಸಂಗೀತ ಪ್ರೇಮಿಗಳ ಮನೆ, ಮನಗಳಲ್ಲಿ ಅಚ್ಚೊತ್ತಿದ್ದು ಕಾತುರದಿಂದ ಕಾಯುವ ಕಾರ್ಯಕ್ರಮವಾಗಿದೆ.



ಜನವರಿ 14ರಂದು ಭಾನುವಾರ ಸಂಜೆ 6.00 ಕ್ಕೆ ಕುಂದಾಪುರ ಬೋರ್ಡ್ ಹೈಸ್ಕೂಲಿನ ಬಯಲು ರಂಗಮಂಟಪದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕ, ಗಾಯಕಿಯರಾದ, ವೇಣುಗೋಪಾಲ ಶಿವಮೊಗ್ಗ, ಅಜೇಯ್ ವಾರಿಯರ್ ಬೆಂಗಳೂರು, ಸುರೇಖಾ ಹೆಗ್ಡೆ ಶಿವಮೊಗ್ಗ, ಸುರೇಖಾ ಕೆ.ಎಸ್. ಬೆಂಗಳೂರು ಮತ್ತು ಇತರರು. ಹಿನ್ನೆಲೆ ಯಲ್ಲಿ ಮಂಗಳೂರಿನ ರಾಜಗೋಪಾಲ್, ಕೇರಳದ ಜಯಪ್ರಕಾಶ್, ಶಿಜಿಮೊನ್, ಮಂಗಳೂರಿನ ರಾಜೇಶ್ ಭಾಗವತ್, ಸಿತಾರ್ ಕಲಾವಿದ ಮಾಸ್ಟರ್ ಸುಮುಖ್ ಮತ್ತು ಇತರ ಕಲಾವಿದರು ಭಾಗವಹಿಸಲಿದ್ದಾರೆ. ಸಂಗೀತಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕಲಾಕ್ಷೇತ್ರ–ಕುಂದಾಪುರ ಇದರ ಅಧ್ಯಕ್ಷ ಬಿ. ಕಿಶೋರ್ ಕುಮಾರ್ ತಮ್ಮ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹನ್ನೆರಡನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ವರ್ಧಮಾನ ೨೦೧೮, ಜನವರಿ 12 ರಿಂದ 14 ರ ತನಕ ಮೂರು ದಿನ ಖಂಬದಕೋಣೆ ಸ.ಪ.ಪೂ.ಕಾಲೇಜಿನ ವಠಾರದಲ್ಲಿ ನಡೆಯಲಿದೆ.

ಪುಂಡಲೀಕ ಹಾಲಂಬಿ ಸಭಾಂಗಣ, ಮೊಗೇರಿ ಗೋಪಾಲಕೃಷ್ಣ ಅಡಿಗ ವೇದಿಕೆಯಲ್ಲಿ ನಡೆಯುವ ಈ ಸಮ್ಮೇಳನದ ಉದ್ಘಾಟನಾ ಸಮಾರಂಭ ದಿನಾಂಕ 12 ರಂದು ಸಂಜೆ 4 ಗಂಟೆಗೆ ನಡೆಯಲಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಜಿ.ಸಿದ್ಧರಾಮಯ್ಯ ಉದ್ಘಾಟನೆ ಮಾಡಲಿದ್ದು, ಸಮ್ಮೇಳನಾಧ್ಯಕ್ಷರಾಗಿ ಮಣಿಪಾಲ ಅಕಾಡೆಮಿಯ ಆಡಳಿತಾಧಿಕಾರಿ ಡಾ|ಎಚ್.ಶಾಂತಾರಾಮ ಮಾತನಾಡಲಿದ್ದಾರೆ.

ಸಚಿವ ಪ್ರಮೋದ್ ಮಧ್ವರಾಜ್, ಶಾಸಕ ಕೆ.ಗೋಪಾಲ ಪೂಜಾರಿ, ಜಿ.ಪಂ.ಅಧ್ಯಕ್ಷ ದಿನಕರ ಬಾಬು, ಕಸಾಪ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಭಾಗವಹಿಸಲಿದ್ದಾರೆ. ವಿವಿಧ ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಸಮ್ಮೇಳನಕ್ಕೆ ಮೆರಗು ನೀಡಲಿದೆ.

## ಜ. 13 ರಂದು ಕುಂದಾಪುರದಿಂದ ಪರ್ಯಾಯ ಹೊರೆ ಕಾಣಿಕೆ

ಉಡುಪಿ ಪರ್ಯಾಯ ಪಲಿಮಾರು ಮಠದ ಪರ್ಯಾಯೋತ್ಸವದ ಅಂಗವಾಗಿ ಕುಂದಾಪುರದಿಂದ ಬೃಹತ್ ಹೊರೆ ಕಾಣಿಕೆ ಸಲ್ಲಿಸಲು ನಿರ್ಧರಿಸಲಾಗಿದ್ದು, ಹೊರೆ ಕಾಣಿಕೆ ಸಲ್ಲಿಸುವವರು ಹಾಗೂ ಹೊರೆ ಕಾಣಿಕೆ ಮೆರವಣಿಗೆಯಲ್ಲಿ ಭಾಗವಹಿಸುವವರು ಜನವರಿ 13 ರಂದು ಶನಿವಾರ ಕುಂದಾಪುರದ ವಡೇರಹೋಬಳಿ ಪ್ರೌಢಶಾಲೆಯ ಎದುರಿಗಿರುವ ಯಕ್ಷಗಾನ ಮೈದಾನಕ್ಕೆ ಬೆಳಿಗ್ಗೆ 10 ಗಂಟೆ ಒಳಗೆ ಆಗಮಿಸಬೇಕೆಂದು ತಿಳಿಸಲಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಈ ಬಗ್ಗೆ ಕಾರ್ಯ ಚಟುವಟಿಕೆ ನಡೆಯುತ್ತಿದ್ದು, ಕುಂದಾಪುರ ಹಾಗೂ ಬೈಂದೂರು ಯೋಜನಾಧಿಕಾರಿಗಳ ವ್ಯಾಪ್ತಿಯಲ್ಲಿ ಆದಷ್ಟು ವಾಹನಗಳಲ್ಲಿ ಹೊರೆ ಕಾಣಿಕೆ ಸಲ್ಲಿಸುವ ಪ್ರಯತ್ನ ನಡೆಯುತ್ತಿದೆ. ಹಲವಾರು ದೇವಾಲಯಗಳೂ ಈ ವಿಚಾರಕ್ಕೆ ಸ್ಪಂದಿಸಿವೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಭಿಮಾನಿಗಳೂ ಸಹ ಹೊರೆಕಾಣಿಕೆ 'ಯೊಂದಿಗೆ ಭಾಗವಹಿಸಬೇಕೆಂದು ಸಮಿತಿಯ ಮುಖ್ಯಸ್ಥರಾದ ಬಿ.ಅಪ್ಪಣ್ಣ ಹೆಗ್ಡೆ, ಕೆ.ಸೂರ್ಯನಾರಾಯಣ ಉಪಾಧ್ಯಾಯ ಹಾಗೂ ಎನ್.ರಾಘವೇಂದ್ರ ರಾವ್ ವಿನಂತಿಸಿದ್ದಾರೆ.

## ಜ.16 ಗಾನ–ಆಖ್ಯಾನ ಶತಕ ಸಂಭ್ರಮ

ವಿದ್ವಾನ್ ಕೆ.ಶ್ರೀಪತಿ ಉಪಾಧ್ಯಾಯ ಹಾಗೂ ವಿದ್ವಾನ್ ಗಣಪತಿ ಭಟ್ ಯಲ್ಲಾಪುರ ಇವರ "ಗಾನ–ಆಖ್ಯಾನ " 100ನೇ ಕಾರ್ಯಕ್ರಮ ಜ.16ರಂದು ಕುಂಭಾಸಿ ಹರಿಹರ ಕ್ಷೇತ್ರದಲ್ಲಿ ನಡೆಯಲಿದೆ.

ಸೋದೆ ಮಠಾಧೀಶರಾದ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರ ಸಾನಿಧ್ಯದಲ್ಲಿ ರಾಮಾಯಣ , ಮಹಾಭಾರತ , ಭಾಗವತ ಹಾಗೂ ಪುರಾಣಗಳ ಕಥಾನಕ ರೂಪವಾದ ಈ ಶತಕದ ಗುಚ್ಛವನ್ನು ಶ್ರೀಕೃಷ್ಣನಿಗೆ ಸಮರ್ಪಿಸಲಾಗುತ್ತದೆ.





ಇದೇ ಸಂದರ್ಭದಲ್ಲಿ "ಗಂಗಾವತರಣ – ಸೀತಾಕಲ್ಯಾಣ " ಎಂಬ ಆಖ್ಯಾನವನ್ನು ಪ್ರಸ್ತುತಪಡಿಸಲಾಗುತ್ತದೆ.

ಈಗಾಗಲೇ ಗಾನ–ಆಖ್ಯಾನ ಕಾರ್ಯಕ್ರಮ ಉಡುಪಿ , ಧರ್ಮಸ್ಥಳ , ಸುಬ್ರಹ್ಮಣ್ಯ , ಕುಂಭಾಸಿ , ಕೊಲ್ಲೂರು, ಮಾರಣಕಟ್ಟೆ , ಸೋದೆ, ಸವಣೂರು, ಕಟೀಲು, ಮಂತ್ರಾಲಯ, ಸಾಲಿಗ್ರಾಮ, ಕೋಟೇಶ್ವರ ಮುಂತಾದ ಪುಣ್ಯಕ್ಷೇತ್ರಗಳಲ್ಲಿ ನಡೆದಿದ್ದು ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ. ಈ 100ನೇ ಕಾರ್ಯಕ್ರಮಕ್ಕೆ ಭಕ್ತಾಭಿಮಾನಿಗಳು ಭಾಗವಹಿಸಬೇಕೆಂದು ಸಂಘಟಕರು ವಿನಂತಿಸಿದ್ದಾರೆ

## ಜನವರಿ 21 ರಂದು ಕುಂದಪ್ರಭ ಕೋ.ಮ.ಕಾರಂತ ಪ್ರಶಸ್ತಿ ಪ್ರದಾನ ಸಮಾರಂಭ

ಕುಂದಪ್ರಭ ಸಂಸ್ಥೆಯ ಆಶ್ರಯದಲ್ಲಿ ಕೋ.ಮ.ಕಾರಂತ ಪ್ರಶಸ್ತಿ ಪ್ರದಾನ ಸಮಾರಂಭ ಜನವರಿ 21 ರಂದು ಕುಂದಾಪುರದ ಸರಕಾರಿ ಪ.ಪೂ.ಕಾಲೇಜಿನ ರೋಟರಿ ಲಕ್ಷ್ಮೀ ನರಸಿಂಹ ಕಲಾಮಂದಿರದಲ್ಲಿ ಸಂಜೆ 4.30ಕ್ಕೆ ನಡೆಯಲಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ರೋಟರಿ ಗವರ್ನರ್, ಬೈಂದೂರು ತಾಲೂಕು ಹೋರಾಟ ಸಮಿತಿಯ ಅಧ್ಯಕ್ಷ ,ಬಿ.ಜಗನ್ನಾಥ ಶೆಟ್ಟಿ ಬೈಂದೂರು ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹಿರಿಯ ವೈದ್ಯಕೀಯ ತಜ್ಞ ಡಾ|ನಾಗೇಶ ಕುಮಾರ್ ಜಿ.ರಾವ್, ಮಣಿಪಾಲ ಹಾಗೂ ಉಡುಪಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಗಣೇಶ ಪ್ರಸಾದ್ ಪಾಂಡೇಲು ಭಾಗವಹಿಸಲಿದ್ದಾರೆ.

ಹಿರಿಯ ಗುತ್ತಿಗೆದಾರರಾದ ರಾಮಕೃಷ್ಣ ಶೇರೆಗಾರ್ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ.

ಭಾರತದ ರಕ್ಷಣಾ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ರಾಷ್ಟ್ರೀಯ ಪ್ರಶಸ್ತಿಗೆ ಪುರಸ್ಕೃತರಾದ ಜಯಪ್ರಕಾಶ್ ರಾವ್ ಕೆ. ಮೈಸೂರು ಇವರಿಗೆ ಕುಂದಪ್ರಭ ಕೋ.ಮ.ಕಾರಂತ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಖ್ಯಾತ ಅಂಕಣಗಾರ ಕೋ.ಶಿವಾನಂದ ಕಾರಂತ ಅಭಿನಂದನಾ ನುಡಿಗಳನ್ನಾಡಲಿದ್ದಾರೆ.

ಸ್ವಚ್ಛ ಭಾರತ ಸ್ವಸ್ಥ ಭಾರತ ಚಿತ್ರಕಲೆ , ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಪುರಸ್ಕಾರ ನೀಡಲಾಗುತ್ತದೆ.

ಈ ಸಮಾರಂಭದಲ್ಲಿ ಸರ್ವರೂ ಪಾಲ್ಗೊಳ್ಳಬೇಕೆಂದು ಕುಂದಪ್ರಭ ಅಧ್ಯಕ್ಷ ಯು.ಎಸ್.ಶೆಣೈ ವಿನಂತಿಸಿದ್ದಾರೆ.